# ಅಚ್ಯುತಾನಂತ ಗೋವಿಂದ ಹರಿ

## ಕೇಶವ ನಾಮ

1. **Ref.:** Shri Purandara Dasara Sahitya Part – 3, Mahatmya Gnyana, edited by Shri Betageri Krishna Sharma and Shri Bengeri Huchhu Rayaru.
2. **Note:** The lyrics followed by the singer are slightly different. Hence, they are given in yellow highlights. The lyrics as per book in Ref. 1 are given separately without highlights.

| | |
|---|---|
| ರಾಗ: ಮಧ್ಯಮಾವತಿ ತಾಳ: ಅಟ | ರಾಗ ಆನಂದ ಭೈರವಿ ರೂಪಕ ತಾಳ |
| | |
| ಅಚ್ಯುತಾನಂತ ಗೋವಿಂದ ಹರಿ | ಅಚ್ಯುತಾನಂತ ಗೋವಿಂದ ಹರಿ |
| ಸಚ್ಚಿದಾನಂದ ಸ್ವರೂಪ ಮುಕುಂದ ॥ ಪ ॥ | ಸಚ್ಚಿದಾನಂದ ಸ್ವರೂಪ ಮುಕುಂದ |
| | |
| ಕೇಶವ ಕೃಷ್ಣ ಮುಕುಂದ ಹರಿ | ಕೇಶವ ಕೃಷ್ಣ ಮುಕುಂದ ಹರಿ |
| ವಾಸುದೇವ ಗುರು ಜಗದಾದಿ ವಂದ್ಯ | ವಾಸುದೇವ ಗುರು ಜಗದಾದಿ ವಂದ್ಯ |
| ಯಶೋದೆಯ ಸುಕೃತದ ಕಂದ ನಮ್ಮ | ಯಶೋದೆಯ ಸುಕೃತದ ಕಂದ ಸ್ವಾಮಿ |
| ಶೇಷ ಶಯನ ಭಕ್ತ ಹೃದಯಾನಂದ ॥ ೧ ॥ | ಶೇಷ ಶಯನ ಭಕ್ತ ಹೃದಯಾನಂದ |
| | |
| ನಾರಾಯಣ ನಿನ್ನ ನಾಮ ಎನ್ನ | ನಾರಾಯಣ ನಿಮ್ಮ ನಾಮ ಎನ್ನ |
| ನಾಲಿಗೆಯೊಳಗಿರಬೇಕೆಂಬ ನೇಮ | ನಾಲಿಗೆ ಮೇಲಿರಬೇಕೆಂಬ ನೇಮ |
| ನಾನು ಬೇಡುವೆ ನಿನ್ನ ಪ್ರೇಮ ಎನ್ನ | ನಾನು ಬೇಡುವೆ ನಿಮ್ಮ ನಾಮ ಎನ್ನ |
| ಪಯಣ ಸಮಯಕೊದಗಲಿ ಗುಣಧಾಮ ॥ ೨ ॥ | ಪಯಣ ಸಮಯಕೊದಗಲಿ ಗುಣಧಾಮ |
| | |
| ಮಾಧವ ಮಂಗಳ ಗಾತ್ರ ಸ್ವಾಮಿ | ಮಾಧವ ಮಂಗಳ ಗಾತ್ರ ಸ್ವಾಮಿ |
| ಯಾದವ ಕೈಲಾಸ ವಾಸನ ಮಿತ್ರ | ಯಾದವ ಕೈಲಾಸ ವಾಸನ ಮಿತ್ರ |
| ಮಹಿಮೆ ಕೇಳಿದರೆ ವಿಚಿತ್ರ ನಿನ್ನ | ಮಹಿಮೆ ಕೇಳಿದರೆ ವಿಚಿತ್ರ ನಿನ್ನ |
| ಮನ ಮೆಚ್ಚಲಿ ಸತ್ಯಭಾಮಾ ಕಳತ್ರ ॥ ೩ ॥ | ಮನ ಮೆಚ್ಚಲಿ ಸತ್ಯಭಾಮಾ ಕಳತ್ರ |
| | |
| ಗೋವಿಂದ ಗೋಪಾಲ ಬಾಲ ಸೋಳ - | ಗೋವಿಂದ ಗೋಪಾಲ ಬಾಲ ಸೋಳ - |

ಸಾಸಿರ ಗೋಪಿಯರ ಆನಂದಲೀಲ
ಜೀವಮಣಿ ಮುಕ್ತ ಮಾಲಾ ನಿನ್ನ-
ನೇನೆಂದು ಕರೆಯಲಿ ಸುಗ್ರೀವ ಪಾಲ ॥ ೪ ॥

ವಿಷ್ಣು ಚಕ್ರವು ಬಂದು ಸುತ್ತಿ ಮೂರು
ಸೃಷ್ಟಿಯನೆಲ್ಲವ ತಿರುಗಿ ಬೆನ್ನಟ್ಟಿ
ಕೃಷ್ಣ ಸಲಹೆಂದು ಮೊರೆಯಿಟ್ಟ ಮುನಿ
ಶ್ರೇಷ್ಠ ಗಿಷ್ಟರ ಮೇಲೆ ಅಭಯವ ಕೊಟ್ಟೆ ॥ ೫ ॥

ಮಧುಸೂದನ ಮಾರಜನಕ ನೀನು
ಮದಗಜ ಸೀಳಿ ಮಲ್ಲರ ಗೆಲಿದೆ ತವಕ
ಒದಗಿ ಕಂಸನ ಕೊಂದ ಬಳಿಕ ನೀ
ಮುದಕಗೆ ಪಟ್ಟವ ಕಟ್ಟಿದೆ ಧನಿಕ ॥ ೬ ॥

ತ್ರಿವಿಕ್ರಮ ತ್ರೈಲೋಕ್ಯನಾಥ ದೇವ
ತ್ರಿಪುರರ ಸತಿಯರ ವ್ರತಕೆ ವಿಘಾತ
ಯದುವಂಶ ಪಾಂಡವ ಪ್ರೀತ ಎನ್ನ
ಹೃದಯದೊಳಡಗಿರೋ ಶ್ರೀ ಜಗನ್ನಾಥ ॥ ೭ ॥

ವಾಮನ ರೂಪಿಲಿ ಬಂದು ಬಲಿಯ
ದಾನವ ಬೇಡಲು ಉಚಿತವು ಎಂದು
ಧಾರೆಯನೆರೆಯಲು ಅಂದು ಬೆಳೆದು
ಧಾರಿಣಿಯೆಲ್ಲವನಳಿದೆ ನೀನಂದು ॥ ೮ ॥

ಶ್ರೀಧರ ಶೃಂಗಾರಧಾರ ದಿವ್ಯ
ಶ್ರೀವತ್ಸ ಲಾಂಛನ ಶ್ರೀ ರಘುವೀರ
ವಾರಿಧಿ ಸಮ ಗಂಭೀರ ಧೀರ ಗೈದೆ
ಕ್ರೂರ ರಕ್ಕಸರನೆಲ್ಲರ ಸಂಹಾರ ॥ ೯ ॥

ಹೃಷಿಕೇಶ ವೃಂದಾವನದಲಿ ನೀ
ನಿಶೆಯಲಿ ಕೊಳಲನೂದುತ ಇರಲಲ್ಲಿ
ಋಷಿ ವೃಂದ ವಂದ್ಯ ನಿನ್ನಗಲಿ ನಿ-

ಸಾಸಿರ ಗೋಪೇರ ಆನಂದಲೀಲ
ನೀಲಮಣಿ ಮುಕ್ತ ಮಾಲಾ ನಿಮ್ಮ-
ನೇನೆಂದು ಕರೆಯಲಿ ಸುಗ್ರೀವ ಪಾಲ

ವಿಷ್ಣು ಚಕ್ರವು ಬಂದು ಸುತ್ತಿ ಮೂರು
ಸೃಷ್ಟಿಯನೆಲ್ಲವ ತಿರುಗಿ ಬೆನ್ನಟ್ಟಿ
ಕೃಷ್ಣ ಸಲಹೆಂದು ಮೊರೆಯಿಟ್ಟ ಮುನಿ
ಶ್ರೇಷ್ಠ ಗಿಷ್ಟರ ಮೇಲೆ ಅಭಯವ ಕೊಟ್ಟೆ

ಮಧುಸೂದನ ಮಾರಜನಕ ಮದ -
ಗಜ ಸೀಳಿ ಮಲ್ಲರ ಗೆಲಿದೆ ನೀ ತವಕ
ಒದಗಿ ಕಂಸನ ಕೊಂದ ಬಳಿಕ ನೀನು
ಮುದಕಗೆ ಪಟ್ಟವ ಕಟ್ಟಿದ್ಯೋ ಧನಿಕ

ತ್ರಿವಿಕ್ರಮ ತ್ರೈಲೋಕ್ಯನಾಥ ದೇವ
ತ್ರಿಪುರದ ಸತಿಯರ ವ್ರತಕೆ ವಿಘಾತ
ಯದುವಂಶ ಪಾಂಡವ ಪ್ರೀತ ಎನ್ನ
ಹೃದಯದೊಳಡಗಿರೋ ಶ್ರೀ ಜಗನ್ನಾಥ

ವಾಮನ ರೂಪಿಲಿ ಬಂದು ಬಲಿಯ
ದಾನವ ಬೇಡಲು ಉಚಿತವು ಎಂದು
ಧಾರೆಯನೆರೆಯಲು ಅಂದು ಬೆಳೆದು
ಧಾರಿಣಿಯೆಲ್ಲವನಳಿದ್ಯೋ ನೀನಂದು

ಶ್ರೀಧರ ಶೃಂಗಾರ ಹಾರ ದಿವ್ಯ
ಶ್ರೀವತ್ಸ ಲಾಂಛನ ಶ್ರೀ ರಘುವೀರ
ವಾರಿಧಿ ಸಮ ಗಂಭೀರ ಧೀರ
ಕ್ರೂರ ರಕ್ಕಸರನೆಲ್ಲರ ಸಂಹಾರಾ

ಹೃಷಿಕೇಶ ವೃಂದಾವನದಲಿ ನೀನು
ಹರುಷದಿ ಕೊಳಲನೂದುತ ಯಮುನೆಯಲಿ
ಸತಿಯರ ಸಮ್ಮೇಳದಲಿ ನೀನು

| | |
|---|---|
| ಮಿಷವು ಬಿಟ್ಟಿರಲಾರೆ ನಿಲ್ಲೋ ಮನದಲಿ ॥ ೧೦ ॥ | ಧರಿಸಿದ್ಯೊ ಮಂದಾರ ಮಾಲೆ ಕೊರಳಲ್ಲಿ |
| | |
| ಪದ್ಮನಾಭ ಕೇಳೊ ಮುನ್ನ ಎನ್ನ | ಪದ್ಮನಾಭ ಕೇಳೊ ಘನ್ನ ಪಾದ - |
| ಸುದ್ದಿಯನ್ನೆಲ್ಲವ ಉಸಿರುವೆ ಘನ್ನ | ಪದ್ಮವ ತೋರಿಸೋ ಬೇಗನೆ ನಿನ್ನ |
| ಅದ್ವೈತ ರೂಪ ಪ್ರಸನ್ನ ಸ್ವಾಮಿ | ಮುದ್ದು ಮುಖವ ತೋರಿ ಎನ್ನ ಬೇಗ |
| ಇದ್ದ ಠಾವಿಗೆ ಕರೆದೊಯ್ಯೊ ನೀನೆನ್ನ ॥ ೧೧ ॥ | ಉದ್ಧಾರ ಮಾಡೆಂದು ಬೇಡುವೆ ನಿನ್ನ |
| | |
| ದಾಮೋದರ ದನುಜ ಹರಣ ಹರಿ | ದಾಮೋದರ ಗುಣ ಧಾಮ ಸ್ವಾಮಿ |
| ರಾಮಚಂದ್ರನೆ ರಘುಕುಲ ಸಾರ್ವಭೌಮಾ | ದಾನವಾಂತಕ ಯದುಕುಲ ಸಾರ್ವಭೌಮ |
| ಸ್ವಾಮಿ ನೀಲಮೇಘಶ್ಯಾಮ ದೇವ | ನೀಲ ಮೇಘ ನಿಭಶ್ಯಾಮ ಕೃಷ್ಣ |
| ಭೂಮಿಜಾಪತಿ ಎಂಬ ಬಹು ಪುಣ್ಯ ನಾಮ ॥ ೧೨ ॥ | ನೀಲಾಪತಿಯೆಂಬ ಬಹು ಪುಣ್ಯ ನಾಮ |
| | |
| ಸಂಕರ್ಷಣ ಸರುವಾಭರಣ ಇಟ್ಟು | ಸಂಕರ್ಷಣ ದನುಜ ಹರಣ ದೇವ |
| ಪಂಕಜಮುಖಿ ದ್ರೌಪದಿ ಮೇಲೆ ಕರುಣ | ಪಂಕಜಮುಖಿ ದ್ರೌಪದಿ ಮೇಲೆ ಕರುಣ |
| ಕುಂಕುಮಾಂಕಿತ ನೀಲ ಕಿರಣ ರತ್ನ | ಕುಂಕುಮಾಂಕಿತ ರೇಖಾ ಚರಣ ನಿಜ |
| ಕಂಕಣ ಭೂಷಣ ಕೌಸ್ತುಭಾಭರಣ ॥ ೧೩ ॥ | ಕಂಕಣ ಕೇಯೂರ ಕೌಸ್ತುಭಾಭರಣ |
| | |
| ವಾಸುದೇವ ಕೇಳೋ ನಿನ್ನ ದಿವ್ಯ | ವಾಸುದೇವ ಕೇಳೋ ನಿನ್ನ ದಿವ್ಯ |
| ಸಾಸಿರನಾಮವ ನೆನೆವನೆ ಧನ್ಯ | ಸಾಸಿರನಾಮವ ನೆನೆವನೆ ಧನ್ಯ |
| ಬೇಸರದೆ ಸಲಹಬೇಕೆನ್ನ ಸ್ವಲ್ಪ | ಬೇಸರದೆ ಸಲಹಬೇಕೆನ್ನ ತುಸು |
| ಘಾಸಿಯ ಮಾಡದೆ ಕರುಣಾ ಸಂಪನ್ನ ॥ ೧೪ ॥ | ಘಾಸಿಯ ಮಾಡದೆ ಕರುಣಾ ಸಂಪನ್ನ |
| | |
| ಪ್ರದ್ಯುಮ್ನ ನೀನೆಂದು ಕರೆಯೆ ದುರ್ - | ಪ್ರದ್ಯುಮ್ನ ನೆಂದು ನಾ ಕರೆದೆ ಎನ್ನ |
| ಬುದ್ಧಿಯನ್ನೆಲ್ಲವ ನಿನ್ನಿಂದ ಮರೆಯೆ | ಬದ್ಧವಾದ ದುಷ್ಕರ್ಮವ ಕಳೆದೆ |
| ಇದ್ದ ದುರ್ವಿಷಯವ ತೊರೆಯೆ ಸಾಧು | ದುರ್ಬುದ್ಧಿ ದುರ್ವಾಕ್ಯ ಮರೆದೆ |
| ಸಜ್ಜನಸಂಗನೆ ನಿನ್ನೊಳು ಬೆರೆಯೆ ॥ ೧೫ ॥ | ಸಾಧು ಸಜ್ಜನರ ಸಂಗ ನಿನ್ನಿಂದ ಬೆರೆದೆ |
| | |
| ಅನಿರುದ್ಧ ಗೋಕುಲದಲ್ಲಿ ನೀ- | ಅನಿರುದ್ಧ ಅನುದಿನದಲ್ಲಿ ನೀ |
| ಅನುದಿನ ಇರಲು ಗೋಪಿಯರ ಮನೆಯಲಿ | ವಿನಯದಿಂದಿದ್ದು ಗೋಪಿಯರ ಮನೆಯಲ್ಲಿ |
| ಸನಕಾದಿ ವಂದ್ಯ ನಿನ್ನಗಲಿ ಒಂದು | ಸನಕಾದಿ ವಂದ್ಯ ನಿನ್ನಗಲಿ ಒಂದು |
| ಕ್ಷಣವೂ ಬಿಟ್ಟಿರಲಾರೆ ನಿಲ್ಲೋ ಮನದಲ್ಲಿ ॥ ೧೬ ॥ | ಕ್ಷಣ ಬಿಟ್ಟಿರಲಾರೆ ನಿಲ್ಲೋ ಮನದಲ್ಲಿ |

| | |
|---|---|
| ಪುರುಷೋತ್ತಮಗಾರು ಸಾಟಿ ಶ್ರೀ - | ಪುರುಷೋತ್ತಮಗಾರು ಸಾಟಿ ಪರಬ್ರಹ್ಮ |
| ಪರಬ್ರಹ್ಮ ಸ್ವರೂಪ ನಿನಗಾರೊ ಧಾಟಿ | ಸ್ವರೂಪಿಯೆ ನಿನಗಾರೊ ಪೋಟಿ |
| ನಿರವದ್ಯ ಭಕ್ತ ಕಿರೀಟ ನಿನ್ನ | ಮಹಿಮೆ ಕೇಳಿದರೊಂದು ಕೋಟಿ ನಿನ್ನ |
| ಶರೀರದೊಳಗೆ ಕಂಡ ಬ್ರಹ್ಮಾಂಡ ಕೋಟಿ ॥ ೧೭ ॥ | ಹೃದಯದಿ ಬ್ರಹ್ಮಾಂಡ ಕಂಡೆ ಕಿರೀಟಿ |
| | |
| ಅಧೋಕ್ಷಜ ಅಸುರ ಸಂಹಾರಿ ದೇವ- | ಅಧೋಕ್ಷಜ ಅಸುರ ಸಂಹಾರಿ ಕೃಷ್ಣ |
| ಅದುಭುತ ರೂಪನೆ ಶಿಶುಪಾಲ ವೈರಿ | ಅದ್ಭುತ ರೂಪ ಶಿಶುಪಾಲನ ವೈರಿ |
| ಭಜಕರ ಪಾಲಿಪ ಶೌರಿ ನೀ | ಭಕ್ತರ ಪಾಲಿಪ ಶೌರಿ ಅಜಾ - |
| ಅಜಮಿಳ ಕರೆದರೆ ಕಾಯ್ದೆ ಮುರಾರಿ ॥ ೧೮ ॥ | ಮಿಳ ನಾರಗನೆನ್ನೆ ಕಾಯ್ದೆ ಮುರಾರಿ |
| | |
| ನರಸಿಂಹ ರೂಪವ ತಾಳಿ ಬಂದೆ | ನರಸಿಂಹ ರೂಪವ ತಾಳ್ದಿ ಕಂದ |
| ಕರೆಯೆ ಕಂಭದಿ ಕಂದನ ಮಾತ ಕೇಳಿ | ಕರೆಯೆ ಕಂಭದಿ ಬಂದು ಕರುಣದಿ ಕಾಯ್ದಿ |
| ದುರುಳ ರಕ್ಕಸನನ್ನು ಸೀಳಿ ನಿನ್ನ | ದುರುಳ ಹಿರಣ್ಯಕನ ಸೀಳ್ದಿ ಅವನ |
| ಕೊರಳಲಿ ಧರಿಸಿದೆ ಕರುಳಿನ ಮಾಲಿ ॥ ೧೯ ॥ | ಕರುಳ ಬಗೆದು ವನಮಾಲೆ ಹಾಕಿದಿ |
| | |
| ಅಚ್ಯುತ ನೀನತಿ ಮುದ್ದು ಗೋಪಿ | ಅಚ್ಯುತ ನೀನತಿ ಮುದ್ದು ಗೋಪಿ |
| ಬಚ್ಚಿಟ್ಟ ಹಾಲು ಮೊಸರು ಬೆಣ್ಣೆ ಮೆದ್ದು | ಬಚ್ಚಿಟ್ಟ ಹಾಲು ಮೊಸರು ಬೆಣ್ಣೆ ಮೆದ್ದು |
| ತುಚ್ಛ ಶಕಟನ ಕಾಲಿಲೊದ್ದು ಕರು | ತುಚ್ಛ ಶಕಟನ ಕಾಲಿಲೊದ್ದು ಕಾಡು |
| ಬಿಚ್ಚಿ ಓಡಿದೆ ಚೋರ ಕಂಡಿಯಲಿ ಕದ್ದು ॥ ೨೦ ॥ | ಕಿಚ್ಚು ನುಂಗಿ ಪಾಲಿಸಿದೆಯೊ ಗೆದ್ದು |
| | |
| ಜನಾರ್ದನ ಕೇಳೊ ಬಿನ್ನಪವ ನೀ | ಜನಾರ್ದನ ರೂಪ ನೀನಾಗಿ ಎನ್ನ |
| ತೊಲಗಿಸು ಬಂದೆನ್ನ ಮನದ ಕಲುಷವ | ಮನದ ಕರ್ಮವ ತೊಲಗಿಸೊ ಮುಂದಾಗಿ |
| ಹೊರಲಾರೆ ಭೂಭಾರ ತನುವ ನಿನ್ನ | ಮುನಿಗಳೆಲ್ಲರು ಒಂದಾಗಿ ಈ |
| ಸ್ಮರಣೆ ಇದ್ದವ ಮುಕ್ತಿ ಪಥವನೆ ಗೆಲುವ ॥ ೨೧ ॥ | ತನು ನಿನ್ನದೆಂಬರೋ ಕೇಳೋ ನಿಜವಾಗಿ |
| | |
| ಉಪೇಂದ್ರನುರಗನ ತುಳಿಯೆ ಆಗ | ಉಪೇಂದ್ರ ರೂಪದಿ ಬಂದಿ ಅಪ್ರ - |
| ಅಪರಿಮಿತ ವಿಷದ ಮಡುವು ಕಲಕಿ ಉಳಿಯೆ | ಮೇಯ ಕಾಳಿಂಗನ ಮಡುವ ಧುಮುಕಿದಿ |
| ತ್ರಿಪುರ ರಕ್ಕಸರನು ಗೆಲಿಯೆ ನಿನ್ನ | ನಾಗನ ಹೆಡೆಗಳ ತುಳಿದಿ ನಾಗ - |
| ಚಪಲತನವ ನೋಡಿ ಸುರರೆಲ್ಲ ಬೆರೆಯೆ ॥ ೨೨ ॥ | ಪತ್ನಿಯರು ಬೇಡೆ ಪತಿಯ ಪಾಲಿಸಿದಿ |
| | |
| ಹರಿ ಹರಿ ಎಂದರೆ ಪಾಪ ರಾಶಿ | ಹರಿ ಹರಿಯೆಂದರೆ ಪಾಪ ರಾಶಿ |
| ಹರಿದು ಹೋಗುವುದು ಮನದ ಸಂತಾಪ | ಹರಿದು ಹೋಯಿತು ಎನ್ನ ಮನದ ಸಂತಾಪ |

ಸರುವರೊಳಗೆ ವಿಶ್ವರೂಪ ನಿನ್ನ
ನೆರೆ ನಂಬಿದವರನು ಸಲಹು ಪ್ರತಾಪ ॥ ೨೩ ॥

ಸರ್ವರೊಳಗೆ ವಿಶ್ವರೂಪ ನಿನ್ನ
ನೆರೆ ನಂಬಿದವರನ್ನು ಸಲಹುವ ಭೂಪ

ಕೃಷ್ಣ ಕೃಷ್ಣನೆಂಬ ಸೊಲ್ಲ ಕೇಳಿ
ನಷ್ಟವಾಗಿ ಹೋಯ್ತು ಪಾತಕವೆಲ್ಲ
ಮುಟ್ಟಿ ಭಜಿಸಿರಿ ಜನರೆಲ್ಲ ಪುರಂದರ
ವಿಠ್ಠಲನಲ್ಲದೆ ಪರ ದೈವವಿಲ್ಲ ॥ ೨೪ ॥

ಕೃಷ್ಣ ಕೃಷ್ಣನೆಂಬ ಸೊಲ್ಲ ಕೇಳಿ
ನಷ್ಟವಾಯಿತು ಎನ್ನ ಪಾಪಗಳೆಲ್ಲ
ಮುಟ್ಟಿ ಭಜಿಸಿರೊ ನೀವೆಲ್ಲ ಪುರಂದರ
ವಿಠ್ಠಲನಲ್ಲದೆ ಮತ್ತೆ ಬೇರಿಲ್ಲ

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಸುಕೃತ** = ಪುಣ್ಯ

**ಪಯಣ ಸಮಯ** = ಮರಣ ಕಾಲ

**ಗಾತ್ರ** = ಅವಯವ

**ಕೈಲಾಸ ವಾಸ** = ಶಿವ

**ಕಳತ್ರ** = ಹೆಂಡತಿ

**ಗೋಪಾಲ ಬಾಲ** = ನಂದಗೋಪಾಲನ ಮಗ

**ಸೋಳಾ** = ಹದಿನಾರು

**ಮುಕ್ತಾ** = ಮುತ್ತು

**ಸುಗ್ರೀವ** = ಸೂರ್ಯ ಮತ್ತು ಋಕ್ಷರಜಸ್ ಇವರ ಮಗ. ವಾಲಿಯ ತಮ್ಮ. ಈತನನ್ನು ಶ್ರೀ ರಾಮ ಅನುಗ್ರಹಿಸಿ ಕಿಷ್ಕಿಂದೆಯ ರಾಜ್ಯಕ್ಕೆ ರಾಜನನ್ನಾಗಿ ಮಾಡಿದ.

**ವಿಷ್ಣು ಚಕ್ರವು ..... ಕೊಟ್ಟ** = ದುರ್ವಾಸ

**ಮದಗಜ** = ಕಂಸನ ಕುವಲಯಾಪೀಡವೆಂಬ ಹೆಸರಿನ ಆನೆ. ಕೃಷ್ಣ ಬಲರಾಮರನ್ನು ಕೊಲ್ಲುವ ಉದ್ದೇಶದಿಂದ ಕಂಸನ ಆಜ್ಞೆಯಂತೆ ಮಾವುತನು ಈ ಆನೆಯನ್ನು ಅವರ ಮೇಲೆ ನೂಕಿದಾಗ ಶ್ರೀ ಕೃಷ್ಣನು ಅದನ್ನು ಕೊಂದನು.

**ಮಲ್ಲರು** = ಚಾಣೂರ ಮುಷ್ಟಿಕ ಎಂಬವರು ಕಂಸನ ಆಸ್ಥಾನ ಜಟ್ಟಿಗಳು. ಬಿಲ್ಲು ಹಬ್ಬಕ್ಕೆಂದು ಕಂಸ ಶ್ರೀ ಕೃಷ್ಣ ಬಲರಾಮರನ್ನು ಮಧುರೆಗೆ ಕರೆಕಳಿಸಿ ಈ ಜಟ್ಟಿಗಳೊಂದಿಗೆ ಮಲ್ಲಯುದ್ಧ ಮಾಡಲು ಹೇಳಿದನು. ಚಾಣೂರನನ್ನು ಕೃಷ್ಣನೂ, ಮುಷ್ಟಿಕನನ್ನು ಬಲರಾಮನೂ ಕೊಂದರು.

**ತವಕ** = ಶೀಘ್ರವಾಗಿ

**ತ್ರಿಪುರ** = ಮಾಯಾಸುರನು ತಾರಕಾಸುರನ ಮಕ್ಕಳಾದ ತಾರಾಕ್ಷ, ಕಮಲಾಕ್ಷ ಮತ್ತು ವಿದ್ಯುನ್ಮಾಲಿಗಳಿಗಾಗಿ ಮೂರು ಪಟ್ಟಣಗಳನ್ನು ಕಟ್ಟಿ ಕೊಟ್ಟನು. ಇವಕ್ಕೆ ತ್ರಿಪುರವೆಂಬ ಹೆಸರು. ಅವರು ದೇವತೆಗಳನ್ನು ಕಾಡತೊಡಗಿ ಧರ್ಮ ಘಾತಕ ಕಾರ್ಯ ಕೈಕೊಳ್ಳಲು ವಿಷ್ಣು ಬುದ್ಧನಾಗಿ ತ್ರಿಪುರರ ಹೆಂಡಂದಿರ ವ್ರತಗೆಡಿಸಿ ಅವರನ್ನು ನಾಶ ಮಾಡಿದನು.

**ಯದುವಂಶ** = ಕೃಷ್ಣ

**ಅದ್ವೈತ** = ಅಸಮಾನವಾದ

**ದಾಮೋದರ** = ಕೃಷ್ಣ

**ಯದು** = ಯಯಾತಿ ಹಾಗು ದೇವಯಾನಿಯರ ಮಗ. ಇವನು ತಂದೆಯ ಇಚ್ಛೆಯನ್ನು ಪೂರೈಸದಿದ್ದುದರಿಂದ ತಂದೆಯಿಂದ ಶಾಪ ಪಡೆದು ರಾಜ್ಯಅಧಿಪತ್ಯಕ್ಕೆ ಎರವಾದನು.

**ವಾಸುದೇವ** = ವಸುದೇವನ ಮಗ; ಕೃಷ್ಣ

**ಸಾಸಿರ ನಾಮ** = ಶ್ರೀ ಹರಿಗೆ ಅನಂತ ನಾಮಗಳಿದ್ದು ಅವುಗಳಲ್ಲಿಯ ಒಂದು ಸಾವಿರ ನಾಮಗಳು ಮಹಾ ಪುಣ್ಯಕರವೆಂದು ಭೀಷ್ಮಾಚಾರ್ಯರು ಧರ್ಮರಾಜನಿಗೆ ಹೇಳಿದ್ದಾರೆ.

**ಗೋಕುಲ** = ಕೃಷ್ಣನನ್ನು ಸಾಕ್ಕಿದ ನಂದನ ಊರು. ಇದು ಮಥುರೆಯ ಹತ್ತಿರ ಯಮುನಾ ನದಿ ದಡದಲ್ಲಿ ಇದೆ.

**ಧಾಟಿ** = ಸರಿಸಮಾನ

**ನಿರವದ್ಯ** = ಪರಿಶುದ್ಧ

**ಕಿರೀಟಿ** = ಅರ್ಜುನ

**ಶೂರ** = ದೇವಮೀಢ ಮತ್ತು ಮಾರಿಷಾ ಇವರ ಮಗ. ಇವನ ಮಗನೇ ವಸುದೇವ. ಕೃಷ್ಣನು ಇವನ ಮೊಮ್ಮಗನಾದುದರಿಂದ ಶೌರಿ ಎಂಬ ಹೆಸರು ಬಂದಿದೆ.

**ಶಕಟ** = ಕಂಸನ ಪರಿವಾರದ ಒಬ್ಬ ರಾಕ್ಷಸ. ಇವನು ಕಂಸನ ಪ್ರೇರಣೆಯಿಂದ ಚಕ್ಕಡಿಯ ರೂಪ ತಳೆದು, ಗೋಕುಲದಲ್ಲಿದ್ದ ಬಾಲ ಕೃಷ್ಣನನ್ನು ಕೊಲ್ಲಲು ಹೋಗಿ ತಾನೇ ಸತ್ತನು.

**ಉರಗ** = ಕಾಳಿಂಗ.

**Classification:** Keerthane
**Ankita:** purandara vittala

**Location:** NA

**Category:** Vishnu Stuti, Dashavatara, Keshava Naama

**Group Words:** Krishna, draupadi, dashavatara, achyuta, Ananta, govinda keshava, yashode, shesha, nalige, Madhava, vaikunta, Gopala, Sugriva, bhumi, Samudra, vrindavana, kolalu, nadi, punya, pandava, shishupala, ajamila, asura, karma, kalinga,

**Pravachana:** NA

**Explanation:** NA